ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 11/2/21

# ಪ್ರತಿಭಟನೆಯೇ ಪರಿಷತ್‌ಗೆ ಪ್ರವೇಶ

ವಿಧಾನಪರಿಷತ್‌ನ ನೂತನ ಸಭಾಪತಿ ಬಸವರಾಜ ಹೊರಟ್ಟಿ ಅವರು 'ಉದಯವಾಣಿ' ಕಚೇರಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದ ಸಂದರ್ಭದಲ್ಲಿ ತಮ್ಮ ಸುದೀರ್ಘ ರಾಜಕೀಯ ಯಾನದ ಅನುಭವಗಳನ್ನು ಮುಕ್ತವಾಗಿ ಹಂಚಿಕೊಂಡರು. ಆ ಬಗ್ಗೆ ಕೆಲವು ಝಲಕ್‌ಗಳು ಹೀಗಿವೆ..

## ಶಿಕ್ಷಕರ ಸಂಘಟನೆ ಮಾಡಿಕೊಂಡು ಹೋರಾಟ

ನಾನು ಕಾಲೇಜು ಟೈಮಿನಲ್ಲಿ ಹೋರಾಟ ಮಾಡುತ್ತಿದ್ದೆ. ಮಹಾರಾಷ್ಟ್ರ ಮೈಸೂರು ರಾಜ್ಯದ ಗಲಾಟೆಯಲ್ಲಿ ಧರ್ಮಪ್ಪ ಅನ್ನುವ ಡಿಸಿಪಿ ನನಗೆ ಹೊಡೆದಿರುವ ಗಾಯ ಇನ್ನೂ ಇದೆ. ನಾನು ಲ್ಯಾಮಿಂಗ್ಟನ್ ಹೈಸ್ಕೂಲ್ ಶಿಕ್ಷಕನಾಗಿ ನೌಕರಿ ಸೇರಿದ್ದೆ. ಅಲ್ಲಿ ಶಿಕ್ಷಕರಿಗೆ ಅನ್ಯಾಯವಾಗುತ್ತಿತ್ತು. ಶಿರೂರು ಎನ್ನುವ ಇಂಗ್ಲಿಷ್ ಟೀಚರ್ ಇದ್ರು. ಅವರು ಅರ್ಧವಾರ್ಷಿಕ ಪರೀಕ್ಷೆಯಲ್ಲಿ ಒಬ್ಬ ವಿದ್ಯಾರ್ಥಿಗೆ 36 ಅಂಕ ಬದಲಿ 26 ಎಂದು ಹಾಕಿದ್ದರು. ಅವರಿಂದ ಅವರನ್ನು ಸಸ್ಪೆಂಡ್ ಮಾಡಿದ್ದರು. ಅದನ್ನು ಪ್ರಶ್ನಿಸಿ ಶಿಕ್ಷಣ ಇಲಾಖೆ ಕಾರ್ಯದರ್ಶಿ ಬಳಿ ಹೋಗಿ ಆಗಿರುವ ಅನ್ಯಾಯ ಪ್ರಶ್ನಿಸಿದೆವು. ಅವರು ಡಿಸಿ ಜೊತೆ ಮಾತನಾಡಿ, ಅಮಾನತು ಆದೇಶ ರದ್ದು ಮಾಡಿದರು. ಅದು ನಮಗೆಲ್ಲರಿಗೂ ಸ್ಫೂರ್ತಿಯಾಯಿತು. ನಂತರ ಶಿಕ್ಷಕರ ಸಂಘ ಮಾಡಿಕೊಂಡು ಹೋರಾಟ ನಡೆಸಿದೆವು. ನಮ್ಮ ಮನವಿಗೆ ಯಾರೂ ಸ್ಪಂದಿಸುತ್ತಿರಲಿಲ್ಲ, ಹೀಗಾಗಿ ಎಲ್ಲರೂ ಪರಿಷತ್ತು ಚುನಾವಣೆಗೆ ನಿಲ್ಲಲು ತೀರ್ಮಾನ ಮಾಡಿದೆವು.

**ಅವ್ವ ಜೋರಾಗಿ ಅತ್ತಳು:** ನಾನು ಚುನಾವಣೆಗೆ ನಿಲ್ಲುತ್ತೇನೆ ಎನ್ನುವ ಸುದ್ದಿ ನಮ್ಮೂರಿಗೆ ಹೋಯಿತು. ಅದು ನಮ್ಮ ಅವ್ವನಿಗೆ ಹೋಗಿ ಅವಳಿಗೆ ಯಾರೋ, 'ನಿನ್ನ ಮಗಾ ಇಲೆಕ್ಷನ್ ನಿಲ್ಲಾಕತ್ತಾನಂತ. ಹೊಲಾ ಮನಿ ಮಾರ್ಕೊಂಡು ಹೊಕ್ಕಾನು' ಅಂತ ಹೇಳಿದ್ದರು. ಅವಳು ಜೋರಾಗಿ ಅತ್ತು ಅಲ್ಲಿಂದ ತಕ್ಷಣ ಬರುವಂತೆ ಊರವರೆಲ್ಲರೂ ಕರೆದರು. ಊರಿಗೆ ಹೋದರೆ, ಸತ್ತವರ ಮನೆಗೆ ಹೋದಂತೆ ಎಲ್ಲರೂ ನನ್ನ ಮನೆಗೆ ಜೊತೆ ಬಂದರು. ಊರಿನ ಹೆಣ್ಣು ಮಕ್ಕಳೆಲ್ಲರೂ ಬಂದು ಕೂತಿದ್ದರು. ನಾನು ಚುನಾವಣೆಗೆ ನಿಲ್ಲುವುದಿಲ್ಲ ಎಂದು ನಮ್ಮ ತಾಯಿಗೆ ಸಮಾಧಾನ ಮಾಡಿ ಬಂದೆ. ಇಲ್ಲಿ ಬಂದ ತಕ್ಷಣ ಸಂಘದವರು ನಿಲ್ಲಲೇಬೇಕು ಎಂದು ಒತ್ತಾಯ ಮಾಡಿದರು. ಅವರ ಬಯಕೆಯಂತೆ ಚುನಾವಣೆಗೆ ನಿಂತೆ.




## ಜುಬ್ಬಾ ಕೊಡಿಸಿದ ಹೆಗಡೆ

ನಾನು ಅತ್ಯಂತ ಸಣ್ಣ ವಯಸ್ಸಿನಲ್ಲಿ ಆಯ್ಕೆಯಾಗಿ ಬಂದಿದ್ದ ಪರಿಷತ್ ಸದಸ್ಯ. ಒಂದು ಟಿ ಶರ್ಟ್ ಬ್ಲಾಕ್ ಪ್ಯಾಂಟ್ ಹಾಕ್ಕೊಂಡು ವಿಧಾನಸೌಧದ ಮುಂದೆ ಬರ್ತಾ ಇದ್ದೆ, ರಾಮಕೃಷ್ಣ ಹೆಗಡೆಯವರು ಕಾರ್‌ನಲ್ಲಿ ಬರ್ತಿದ್ರು, ಅವರು ನನ್ನ ನೋಡಿ, ಯಾರಪ್ಪಾ ನೀನು ಇಲ್ಲಿ ಬರ್ತಿದಿಯಾ ಅಂದ್ರು, ನಾನು ಬಸವರಾಜ ಹೊರಟ್ಟಿ ಸರ್ ಅಂದೆ. ಅವರಿಗೆ ನಾನು ಟಿ ಶರ್ಟ್ ಮತ್ತು ಕರಿ ಪ್ಯಾಂಟ್ ಹಾಕಿರೋದು ಇಷ್ಟ ಆಗಿರಲಿಲ್ಲ, ಅವರಿಗೆ ನೀವು ಚುನಾವಣೆ ಪ್ರಚಾರಕ್ಕೆ ಹೀಗೇ ಬಂದಿದ್ದೀರಿ ಎಂದೆ. ಅವರು ಏ ಮೂರ್ಖ ಅದು ಚುನಾವಣೆ, ಇದು ವಿಧಾನಸೌಧ ಎಂದು ಹೇಳಿದರು. ನನ್ನ ಮೇಲೆ ಅವರಿಗೆ ಪ್ರೀತಿ ಜಾಸ್ತಿ ಇತ್ತು. ನನ್ನನ್ನು ತಮ್ಮ ಚೇಂಬರ್‌ಗೆ ಕರೆಯಿಸಿಕೊಂಡು ತಮ್ಮ ಪಿಎಸ್ ರಾಮಪ್ಪಗೆ ನನ್ನ ಕರೆದುಕೊಂಡು ಹೋಗುವಂತೆ ಸೂಚಿಸಿದರು. ಅವರು ಕಾರಿನಲ್ಲಿ ಖಾದಿ ಭಂಡಾರಕ್ಕೆ ಕರೆದುಕೊಂಡು ಹೋಗಿ ಆರು ಸೆಟ್ ಜುಬ್ಬಾ ಪೈಜಾಮ ಕೊಡಿಸಿದ್ರು. ಶಾಸಕರಾದವರು ಈ ರೀತಿ ಬಟ್ಟೆ ತೊಟ್ಕೊಂಡು ಬರಬೇಕು ಅಂತ ಹೆಗಡೆಯವರು ಹೇಳಿ ಕಳಿಸಿದ್ರು. ಅವರು ಸಾಯೋವರೆಗೂ ಅವರನ್ನು ನಾನು ಬಿಟ್ಟು ಎಲ್ಲಿಯೂ ಹೋಗಲಿಲ್ಲ.

ಉ ಸಂವಾದ

## 200 ರೂ. ಸಾಲ ಕೇಳಿದ ನಜೀರ್ ಸಾಬ್

ನಾವು ಬೃಂದಾವನಕ್ಕೆ ಟೂರ್ ಹೋಗಿದ್ದೆವು. ಆಗ ನಜೀರ್ ಸಾಬ್ ನನಗೆ ಮುನ್ನಾ ಅಂತ ಕರಿತಿದ್ದರು. ಅವರು ನನ್ನನ್ನು ಹತ್ತಿರ ಕರೆದು 200 ರೂ. ಇದ್ದರೆ ಕೊಡು ಎಂದು ಕೇಳಿದರು. ಅವರಿಗೆ 200 ರೂ ಕೊಟ್ಟೆ, ಅದನ್ನು ನೋಡಿದ ರಘುಪತಿಯವರು 'ಅವನೇನು ಕೇಳಿದ?' ಎಂದರು. ನಾನು ದುಡ್ಡು ಬಿಟ್ಟು ಬಂದಿದ್ದರಂತೆ ಅದಕ್ಕೆ ಹಣ ಕೇಳಿದರು. ಅವನೆಲ್ಲಿ ಬಿಟ್ಟು ಬರುತ್ತಾನೆ. ಅವನ ಬಳಿ ಹಣ ಎಲ್ಲಿ ಬರುತ್ತೆ. ಭಿಕ್ಷೆ ಬೇಡಲಿಕ್ಕೆ ಹೋಗುತ್ತಾನೆ ಎಂದರು. ಅವರಿಗೆ ಕ್ಯಾನ್ಸರ್ ಆಗಿದ್ದಾಗ ರಮೇಶ್ ಕುಮಾರ್, ಎಂ.ಸಿ. ನಾಣಯ್ಯ ಸೇರಿ ತಮ್ಮ ಸೈಟ್ ಮಾರಿ ಅವರಿಗೆ ಚಿಕಿತ್ಸೆ ಕೊಡಿಸಿದ್ದರು.

**ರೂಮ್ ನಂಬರ್ 435:** ವಿ.ಎಸ್. ಕೃಷ್ಣ ಅಯ್ಯರ್ ಅಂತ ಉಪ ಸಭಾಪತಿ ಇದ್ದರು. ಅವರು ಸುಬ್ಬರಾಯರು ಎಂಬುವವರಿಗೆ ಫೋನ್ ಮಾಡಿ ಹೊರಟ್ಟಿಯವರಿಗೆ ರೂಮು ಕೊಡಬೇಕು ಎಂದರು. ಆಗ ಸುಬ್ಬರಾಯರು, ದೇವರಾಜ ಅರಸರಿಗೆ ಒಂದು ರೂಮ್ ಮೀಸಲಿಡಲಾಗಿದೆ. ಅವರು ಬಿಟ್ಟು ಕೊಟ್ಟರೆ ಕೊಡಬಹುದು ಎಂದರು. ಅಯ್ಯರ್ ಅವರು ತಕ್ಷಣ ದೇವರಾಜ ಅರಸರಿಗೆ ಫೋನ್ ಮಾಡಿ, ಬುದ್ಧಿ ಒಬ್ಬ ಹೊಸ ಹುಡುಗನಿಗೆ ರೂಮ್ ಬೇಕಿತ್ತು, ನೀವು ಬಿಟ್ಟು ಕೊಟ್ಟರೆ ಅನುಕೂಲವಾಗುತ್ತದೆ ಎಂದು ಕೇಳಿದರು. ಆಗ ಅರಸರು ರೂಮ್ ಬಿಟ್ಟುಕೊಟ್ಟರು. 16 ಮಾರ್ಚ್ 1981ಕ್ಕೆ ಅಲ್ಲಿಗೆ ಬಂದಿದ್ದೇನೆ. ನಾನು ಮಂತ್ರಿಯಾದಾಗ ರೂಮ್ ಬಿಡುವಂತೆ ಕೆ.ಆರ್. ಪೇಟೆ ಕೃಷ್ಣ ಅವರು ಸೂಚನೆ ಕೊಟ್ರು, ಪ್ರತಿ ತಿಂಗಳು ಹತ್ತು ಸಾವಿರ ದಂಡ ಹಾಕಿದರು. ಅದನ್ನು ಕೊಟ್ಟು ಈಗಲೂ ಅದೇ ರೂಮಿನಲ್ಲಿದ್ದೇನೆ.

## ಸೋಲಿಸಿ ಪುಣ್ಯ ಕಟ್ಟಿಕೊಳ್ಳಿ

2008ರಲ್ಲಿ ಯಡಿಯೂರಪ್ಪ ನನ್ನನ್ನು ಬಿಜೆಪಿಗೆ ಬರುವಂತೆ ಕೇಳಿದರು. ಆಗ ನಾನು ಒಂದು ವಾರ ಸಮಯ ಕೊಡಿ ಎಂದು ಕೇಳಿದೆ. ಅವರು ಮೆಂಬರ್‌ಶಿಪ್ ಪತ್ರವನ್ನೂ ತಂದಿದ್ದರು. ನಾನು ಟೈಮ್ ಕೇಳಿದ್ದಕ್ಕೆ ಸಿಟ್ಟು ಬಂದು ಮುಂದಿನ ಚುನಾವಣೆಯಲ್ಲಿ ನಿನ್ನ ಸೋಲಿಸಿಯೇ ವಾಪಸ್ ಹೋಗುತ್ತೇನೆ ಎಂದರು. ನಾನು ಆಯ್ತು ಎಂದೆ. ಚುನಾವಣೆ ಪ್ರಚಾರದ ಸಂದರ್ಭದಲ್ಲಿ ಕೋರೆಯವರ ಮನೆ ಕಾರ್ಯಕ್ರಮದಲ್ಲಿ ಬಂದಾಗ ನನ್ನ ಪತ್ನಿಗೆ ನಿನ್ನ ಗಂಡನನ್ನು ಈ ಬಾರಿ ಸೋಲಿಸುತ್ತೇನೆ ಎಂದು ಹೇಳಿದರು. ಅವಳು ಅಷ್ಟು ಮಾಡಿ ಪುಣ್ಯ ಕಟ್ಟಿಕೊಳ್ಳಿ ಎಂದು ಕೈ ಮುಗಿದಳು. ಅದೇ ಚುನಾವಣಾ ಸಂದರ್ಭದಲ್ಲಿ ಯಡಿಯೂರಪ್ಪ ಅವರು ಎದುರಿಗೆ ಸಿಕ್ಕು ಚುನಾವಣೆ ಖರ್ಚಿಗೆ ಏನಾದರೂ ಹಣ ಬೇಕಿದ್ದರೆ ಹೇಳು ಎಂದು ಕೇಳಿದ್ದರು.

**ಮಂತ್ರಿ ಮಾಡಿದ ಗೌಡರು:** ದೇವೇಗೌಡರು ಜೀವನದಲ್ಲಿ ಸಾಕಷ್ಟು ಹೋರಾಟ ಮಾಡಿಕೊಂಡು ಬಂದಿದ್ದಾರೆ. ಒಂದು ಸಾರಿ ನನ್ನ ಮನೆಗೆ ಬಂದಾಗ ಹೊರಟ್ಟಿ ಮುಂದಿನ ಸಾರಿ ಮಂತ್ರಿ ಅಂತ ಹೇಳಿ ಹೋದರು. 29 ಸ್ಥಾನ ಇರುವ ಪಕ್ಷ ಯಾವಾಗ ಅಧಿಕಾರಕ್ಕೆ ಬರಬೇಕು ಎಂದು ನಾವು ಅದನ್ನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಮುಂದಿನ ಚುನಾವಣೆಯಲ್ಲಿ ಜೆಡಿಎಸ್‌ಗೆ 58 ಸ್ಥಾನ ಬಂದವು. ಎಂ.ಪಿ.ಪ್ರಕಾಶ್, ಸಿಂಧ್ಯಾ, ಪರಿಷತ್ ಸದಸ್ಯನಾದ ನನಗೆ ಮಂತ್ರಿ ಮಾಡಲು ವಿರೋಧ ಮಾಡಿದರು. ಆದರೂ ದೇವೇಗೌಡರು ಮಾತು ಕೊಟ್ಟಿದ್ದೇನೆ ಅಂತ ನನ್ನ ಮಂತ್ರಿ ಮಾಡಿದರು. ನಾನು ಗೌಡರ ಮೇಲೆ ನಂಬಿಕೆ ಇಟ್ಟುಕೊಂಡಿದ್ದೇವೆ. ಅವರೂ ನನ್ನ ಗೌರವಯುತವಾಗಿ ನೋಡಿಕೊಂಡಿದ್ದಾರೆ.